# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

## ಪ್ರಕಟಣೆಯ ಕೃಪೆಗಾಗಿ

## *"ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆಗೆ ಗಿಡ ನೆಡುವ ಕೈಂಕರ್ಯ"*

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಚ್ಛತಾ ಅಭಿಯಾನ ಹಾಗೂ ಗಿಡ ನೆಡುವ ಕಾರ್ಯಕ್ರಮ

ಕೊಳ್ಳೇಗಾಲ 27.09.2017: ಸ್ವಚ್ಛತೆಯಿಂದ ಸ್ವಾಸ್ಥ್ಯ ಜೀವನ ಸಾಧ್ಯ, ಅದರಂತೆ ಗಿಡ ಮರಗಳನ್ನು ಪೋಷಿಸುವುದರಿಂದ ಪರಿಸರ ಸಂರಕ್ಷಣೆ ಸಾಧ್ಯ ಎಂದು ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಪ್ರೊ. ಎಂ ಪಿ ನಟರಾಜು, ನಿವೃತ್ತ ಪ್ರಾಚಾರ್ಯರು, ಕೊಳ್ಳೇಗಾಲರವರು ಮಾತನಾಡಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಚ್ಛತಾ ಅಭಿಯಾನದ ಅಂಗವಾಗಿ ಮಹಿಳಾ ವಸತಿ ನಿಲಯದ ಒಳ ಮತ್ತು ಹೊರ ಆವರಣದ ಸ್ವಚ್ಛತಾ ಕಾರ್ಯಕ್ರಮ ಹಾಗೂ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕ ವರ್ಗದವರಿಂದ ಆಯೋಜಿಸಲಾಗಿತ್ತು.

ಸಸಿ ನೆಡುವಂತಹ ಕಾರ್ಯಕ್ರಮಗಳು ಹೆಚ್ಚಾಗಿ ನಡೆಸುವ ಮೂಲಕ ಮುಂದಾಗಬಹುದಾದ ಜಲಕ್ಷಾಮವನ್ನು ತಡೆಗಟ್ಟಬಹುದಾಗಿದೆ. ಇಂತಹ ಒಳ್ಳೆಯ ಕಾರ್ಯಕ್ರಮಗಳಿಗೆ ಎಲ್ಲರೂ ಅದರಲ್ಲೂ ಯುವಶಕ್ತಿ, ವಿದ್ಯಾರ್ಥಿವೃಂದವು ಕೈಜೋಡಿಸಬೇಕಿದೆ ಎಂದು ಕರೆ ನೀಡಿದರು.

ಪ್ರಾಚಾರ್ಯ ಪ್ರೊ. ಉಮೇಶ ಮಾತನಾಡಿ ಇಂದು ಹೆಚ್ಚುತ್ತಿರುವ ತಾಪಮಾನವನ್ನು ತಡೆಗಟ್ಟುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ನಗರೀಕರಣವು ವ್ಯಾಪಕವಾಗಿ ನಡೆಯುತ್ತಿದ್ದು, ಬದಲಾವಣೆ ಬಯಸುವಾಗ ಇದು ಅನಿವಾರ್ಯ ಆದರೆ ಅದರ ಜೊತೆಗೆ ಹಸಿರೀಕರಣವೂ ನಡೆಯುವಂತಾಗಬೇಕು. ವಿದ್ಯಾರ್ಥಿಗಳು ಸ್ವಚ್ಛತಾ ಅಭಿಯಾನದಲ್ಲಿ ಕ್ರಿಯಾಶೀಲತೆಯಿಂದ ಪಾಲ್ಗೊಳ್ಳಬೇಕು ಜೊತೆಗೆ ಮನಸ್ಸಿನ ಕಲ್ಮಶವನ್ನು ಸ್ವಚ್ಛತೆ ಮಾಡಿಕೊಂಡು ಸ್ವಾಸ್ಥ್ಯ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕು. ಯುವಜನತೆ ಮನಸ್ಸು ಮಾಡಿದರೆ ವಿಶ್ವವನ್ನು ಬದಲಿಸಬಹುದು ಎಂಬ ನಂಬಿಕೆ ಸ್ವಾಮಿ ವಿವೇಕಾನಂದರದ್ದಾಗಿತ್ತು. ಕಾಲೇಜು ಕ್ಯಾಂಪಸ್‌ಗಳು ಸ್ವಚ್ಛತಾ ಅಭಿಯಾನ, ಪರಿಸರ ಸಂರಕ್ಷಣೆ, ಮುಂತಾದ ಕಾರ್ಯ ಚಟುವಟಿಕೆಗಳ ದೊಡ್ಡ ಅಖಾಡವಾಗಬೇಕು ಎಂದು ವಿದ್ಯಾರ್ಥಿನಿಯರಿಗೆ ತಿಳಿ ಹೇಳಿದರು.

ವಿದ್ಯಾರ್ಥಿನಿಯರು ವಸತಿ ನಿಲಯದ ಒಳ ಹಾಗೂ ಹೊರ ಆವರಣವನ್ನು ಸ್ವಚ್ಛಗೊಳಿಸಿ ನಂತರ ಹೊರಾವರಣದಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡರು.

ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಸಸಿ ನೆಡುವ ಮೂಲಕ ಚಾಲನೆ ನೀಡುತ್ತಿರುವ
ಪ್ರೊ. ಎಂ ಪಿ ನಟರಾಜು, ನಿವೃತ್ತ ಪ್ರಾಚಾರ್ಯರು, ಕಾಲೇಜಿನ ಪ್ರಾಚಾರ್ಯ ಪ್ರೊ.ಉಮೇಶ
ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ. ಎಂ ಪ್ರಭುರವರನ್ನು ಕಾಣಬಹುದು

